# Indian Catholic Youth Movement
## *Diocese of Shimoga*

Rev. Fr.Ronald Veigas
Director: ICYM, YCS/YSM
Email: shimogaicym@gmail.com
Ph: 08182258444, 9449547434

Yuva Mitra
C/O Infant Jesus Church
Sharavathinagar
Shimoga-577201

---

ಸುತ್ತೋಲೆ: 2013/1 ದಿನಾಂಕ 25–01–2013

ಆತ್ಮೀಯ ಗುರುಗಳೇ, ಕನ್ಯಾಭಗಿನಿಯರೇ ಮತ್ತು ಯುವಮಿತ್ರರೇ,

### I ವಲಯ ಯುವನಿರ್ದೇಶಕರು ಮತ್ತು ಮಹಿಳಾ ಸಚೇತಕಿಯರು

ನೂತನ ವಲಯ ಯುವನಿರ್ದೇಶಕರು ಮತ್ತು ಮಹಿಳಾ ಸಚೇತಕಿಯರನ್ನು ಯುವಮಿತ್ರ ಬಳಗ ಪ್ರೀತಿಯಿಂದ ಸ್ವಾಗತಿಸುತ್ತದೆ ಹಾಗೂ ಯುವಮಿತ್ರರ ಸೇವೆಯಲ್ಲಿ ನಿಮಗೆ ಶುಭಹರಸುತ್ತದೆ.

| S.N | Deanery | Director | Youth Animator |
|---|---|---|---|
| 1 | Vianny | Fr. Biju V.R (Nagar)<br>Ph: 9448961831 | Sr. Elwin D'Souza UFS<br>(Thirtahalli)<br>Ph: 9448823600 |
| 2 | Carmel | Fr. David Dellario<br>(Thandagunda)<br>Ph: 9480198284 | Sr. Vinny Gonsalves S.Sp.S<br>(Shikaripura )<br>Ph: 9481541640 |
| 3 | Little Flower | Fr. Anthonydas S.J<br>(Harihar)<br>Ph: 9741473913 | Sr. Sunitha Serrao Csst (Harihar)<br>Ph: 9035991690 |
| 4 | Holy Family | Fr. J.B Castelino (Hiriyur)<br>Ph: 9449641622 | Sr. Felcy D'Cunha UFS<br>(Molakalmuru)<br>Ph: 9611365193 |

### II ಕ್ರಿಸ್ಮಸ್ ಯುವ ಸಂಭ್ರಮ – 2012

- ಯುವಮಿತ್ರ – ಶಿವಮೊಗ್ಗ ಯುವಜನ ಆಯೋಗ ಕ್ರಿಸ್ಮಸ್ ಹಬ್ಬದ ಪ್ರಯುಕ್ತ, ದಿನಾಂಕ 30–12–2012 ರಂದು ಏಕಕಾಲದಲ್ಲಿ ಶಿವಮೊಗ್ಗದ ಪ್ರಧಾನಾಲಯದಲ್ಲಿ ಮತ್ತು ಚಿತ್ರದುರ್ಗದ ಪವಿತ್ರ ಕುಟುಂಬ ದೇವಾಲಯದಲ್ಲಿ **ಕ್ರಿಸ್ಮಸ್ ಯುವ ಸಂಭ್ರಮ – 2012** ಶಿರ್ಷಿಕೆಯಡಿಯಲ್ಲಿ ಆಯೋಜಿಸಿದ ಸ್ಪರ್ಧೆಗಳು ತುಂಬಾ ಯಶಸ್ವಿಯಾಗಿ ನಡೆದವು. ಈ ಯಶಸ್ವಿಗೆ ಕಾರಣಕರ್ತರಾದ ವಂ|| ಆಲ್ವಿನ್ ಸ್ಟೇನಿಸ್ಲವುಸ್ ಹಾಗೂ ವಂ|| ರಿಚ್ಚರ್ಡ್ ಪಾಯಸ್‌ರನ್ನು ಅಭಿನಂದಿಸುವಾಗ, ಉಚಿತವಾಗಿ ಸಭಾಂಗನಗಳನ್ನು ನೀಡಿದ ಪ್ರಧಾನಾಲಯದ ಧರ್ಮಗುರು ವಂ|| ಯೇಸು ರಕ್ಷಕನಾಥನ್ ಹಾಗೂ ಚಿತ್ರದುರ್ಗದ ಸಂತ. ಜೋಸೆಫರ

ಕಾನ್ವೆಂಟಿನ ಧರ್ಮಭಗಿನಿಯರನ್ನು ಯುವಮಿತ್ರ ಅಭಿಮಾನದಿಂದ ವಂದಿಸುತ್ತದೆ. ಈ ಸುಕಾರ್ಯಕ್ಕಾಗಿ ಆರ್ಥಿಕ ನೆರವು ನೀಡಿ ಪ್ರೋತ್ಸಾಹಿಸಿದ ಎಲ್ಲಾ ಸನ್ಮಿತ್ರ ಗುರುಗಳನ್ನೂ, ಧರ್ಮಭಗಿನಿಯರನ್ನೂ ಹಾಗೂ ಧರ್ಮಕ್ಷೇತ್ರದ ಅನೇಕ ಯುವಜನ ಹಿತಚಿಂತಕ ದೇವಜನರನ್ನೂ ಹ್ರದಯಾಂತರಾಳದಿಂದ ನೆನೆಸಿ ವಂದಿಸುತ್ತೇವೆ. ಯುವಜನತೆಯಲ್ಲಿ ನಿಮ್ಮ ಪ್ರೀತಿ ಮತ್ತು ಅಭಿಮಾನ ಇನ್ನೂ ಹೆಚ್ಚಲಿ ಎಂಬುದೇ ನಮ್ಮ ಆಶಯ.

- **ಕ್ರಿಸ್ಮಸ್ ಯುವ ಸಂಭ್ರಮ – 2012 ರ ವಿಜೇತರು.**

1)ಕಾರ್ಮೆಲ್ ವಲಯ ಮತ್ತು ವಿಯನ್ನಿ ವಲಯ

- **ಐ.ಸಿ.ವೈ.ಎಮ್** : 1) ಪ್ರಥಮ: ಸಂತ. ಅಂತೋಣಿ ದೇವಾಲಯ, ರಾಗಿಗುಡ್ಡ
  2) ದ್ವಿತೀಯ: ಅಮಲೋದ್ಭವಿಮಾತೆ ದೇವಾಲಯ, ನವನಗರ
  3) ತ್ರತಿಯ: ಸಂತ. ಅಂತೋಣಿ ದೇವಾಲಯ, ಕಾರೆಹಳ್ಳಿ

- **ವೈಸಿಎಸ್/ವೈಎಸ್ಎಮ್:** 1) ಪ್ರಥಮ: ಸಂತ. ಜೋಸೆಫರ ದೇವಾಲಯ, ಸಾಗರ
  2) ದ್ವಿತಿಯ: ಸಂತ. ಅಂತೋಣಿ ದೇವಾಲಯ, ರಾಗಿಗುಡ್ಡ
  3) ತ್ರತೀಯ: ಬಾಲ ಯೇಸುವಿನ ದೇವಾಲಯ, ಶರಾವತಿನಗರ

2) ಕಿರು ಪುಷ್ಪ ವಲಯ ಮತ್ತು ಪವಿತ್ರ ಕುಟುಂಬ ವಲಯ

- **ಐ.ಸಿ.ವೈ.ಎಮ್** 1) ಪ್ರಥಮ: ಸಂತ. ತೋಮಸರ ದೇವಾಲಯ, ದಾವಣಗೆರೆ
  2) ದ್ವಿತೀಯ: ಆರೋಗ್ಯ ಮಾತೆ ಪುಣ್ಯಕ್ಷೇತ್ರ, ಹರಿಹರ
  3)ತ್ರತೀಯ: ಪವಿತ್ರ ಕುಟುಂಬ ದೇವಾಲಯ,ಚಿತ್ರದುರ್ಗ

- **ವೈಸಿಎಸ್/ವೈಎಸ್ಎಮ್:** 1) ಪ್ರಥಮ: ಪವಿತ್ರ ಕುಟುಂಬ ದೇವಾಲಯ,ಚಿತ್ರದುರ್ಗ
  2) ದ್ವಿತೀಯ: ಆರೋಗ್ಯ ಮಾತೆ ಪುಣ್ಯಕ್ಷೇತ್ರ, ಹರಿಹರ
  3) ತ್ರತೀಯ: ಸಂತ. ತೋಮಸರ ದೇವಾಲಯ, ದಾವಣಗೆರೆ

**ಸ್ಪರ್ಧೆಯಲ್ಲಿ ಭಾಗವಹಿಸಿದ ಧರ್ಮಕೇಂದ್ರಗಳು** 1) ಸಾಗರ 2) ರಾಗಿಗುಡ್ಡ 3) ಶರಾವತಿನಗರ 4) ನವನಗರ–ಭದ್ರಾವತಿ 5) ಕಾರೆಹಳ್ಳಿ 6) ಹರಿಹರ 7) ದಾವಣಗೆರೆ 8) ಚಿತ್ರದುರ್ಗ

ಸ್ಪರ್ಧೆಯಲ್ಲಿ ವಿಜೇತರಾದ ಎಲ್ಲರನ್ನೂ ಅಭಿನಂದಿಸುವಾಗ, ಭಾಗವಹಿಸಿದ ಎಲ್ಲಾ ಧರ್ಮಕೇಂದ್ರಗಳನ್ನು ಯುವಮಿತ್ರ ವಂದಿಸುತ್ತದೆ.

## III DEXCO ಮತ್ತು GENERAL BODY ತರಬೇತಿ ಕಾರ್ಯಗಾರ

ವಾರ್ಷಿಕ ಯೋಜನೆಯನ್ವಯ ಹಮ್ಮಿಕೊಂಡ ಐ.ಸಿ.ವೈ.ಎಮ್‌ನ ಧರ್ಮಕ್ಷೇತ್ರಮಟ್ಟದ ಪದಾಧಿಕಾರಿಗಳು ಹಾಗೂ ಧರ್ಮಕೇಂದ್ರದ ಎಲ್ಲಾ ಪದಾಧಿಕಾರಿಗಳಿಗೂ ಒಂದು ದಿನದ ತರಬೇತಿ ಕಾರ್ಯಗಾರವನ್ನು ಹರಿಹರದಲ್ಲಿ ಆಯೋಜಿಸಲಾಗಿದೆ.

ಸ್ಥಳ: ಹರಿಹರಮಾತೆ ಸಭಾಭವನ, ಹರಿಹರ.

ದಿನಾಂಕ: 10-02-2013

ಸಮಯ: ಬೆಳಿಗ್ಗೆ 9.30 ರಿಂದ ಸಂಜೆ 4 ರ ತನಕ

**ಕಾರ್ಯಕ್ರಮಗಳು:**

೧) ಆಪತ್ತು ನಿರ್ವಹಣೆ (Disaster Management) ಸಂಪನ್ಮೂಲ ವ್ಯಕ್ತಿ: ಡಾ:ಕುಮಾರ್

೨) ನಾಯಕತ್ವ (Leadership) ಸಂಪನ್ಮೂಲ ವ್ಯಕ್ತಿ: ವಂ|| ರೋಮನ್ ಪಿಂಟೊ

೩) ಸ್ವ-ಪ್ರತಿಷ್ಟೆ (Self-Esteem) ಸಂಪನ್ಮೂಲ ವ್ಯಕ್ತಿ: ವಂ|| ರೋನಾಲ್ಡ್ ವೇಗಸ್

## IV ಧರ್ಮಕ್ಷೇತ್ರ, ವಲಯ ಹಾಗೂ ಧರ್ಮಕೇಂದ್ರದ ಘಟಕಗಳು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಾಗ ಮನಸ್ಸಿನಲ್ಲಿಡಬೇಕಾದ ವಿಚಾರಗಳು

- ಧರ್ಮಕೇಂದ್ರದ ಘಟಕಗಳು ಕಾರ್ಯಕ್ರಮಗಳನ್ನು ರೂಪಿಸುವಾಗ ಧರ್ಮಕೇಂದ್ರದ ಪರಿಧಿಗೆ ಮಾತ್ರ ಸಿಮಿತಗೋಳಿಸುವುದು. ಧರ್ಮಕ್ಷೇತ್ರದ ಯುವನಿರ್ದೇಶನಾಲಯದಿಂದ ಅಂಗೀಕ್ರತವಾದ ಧರ್ಮಕೇಂದ್ರದಲ್ಲಿನ ಯುವ ಘಟಕಗಳಿಗೆ ಧರ್ಮಕೇಂದ್ರದ ಗುರುಗಳು ನಿರ್ದೇಶಕರು ಆದುದರಿಂದ ಯಾವುದೇ ಕಾರ್ಯಕ್ರಮ ಹಮ್ಮಿಕೊಳ್ಳುವಾಗ ಅವರನ್ನು ಸಮಾಲೋಚಿಸುವುದು ಹಾಗೂ ಪತ್ರ ವ್ಯವಹಾರ ಮಾಡುವಾಗ ಅವರ ಸಹಿ ಹಾಗೂ ಮುದ್ರೆ ಕಡ್ಡಾಯ ಎನ್ನುವುದನ್ನು ನೆನಪಿನಲ್ಲಿಡುವುದು.
- ಧರ್ಮಕೇಂದ್ರಮಟ್ಟದಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ ಬೇರೆ ಧರ್ಮಕೇಂದ್ರದವರನ್ನೂ ಆಮಂತ್ರಿಸುವುದಿದ್ದಲ್ಲಿ ಧರ್ಮಕೇಂದ್ರದ ಗುರುಗಳ ಮೂಲಕ ವಲಯನಿರ್ದೇಶಕರ ಅನುಮತಿ ಪಡೆಯುವುದು ಹಾಗೂ ಧರ್ಮಕ್ಷೇತ್ರದ ನಿರ್ದೇಶಕರ ಗಮನಕ್ಕೆ ತರುವುದು ಅತೀ ಅವಶ್ಯಕ.
- ಧರ್ಮಕೇಂದ್ರಮಟ್ಟದಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ ಧರ್ಮಕ್ಷೇತ್ರದ ಎಲ್ಲಾ ಧರ್ಮಕೇಂದ್ರದ ಘಟಕಗಳನ್ನು ಆಮಂತ್ರಿಸುವ ಮುನ್ನ ಧರ್ಮಕೇಂದ್ರದ ಗುರುಗಳ ಮೂಲಕ ಧರ್ಮಕ್ಷೇತ್ರದ ನಿರ್ದೇಶಕರಲ್ಲಿ ಸಮಾಲೋಚನೆ ಹಾಗೂ ಅವರ ಅನುಮತಿ ಪತ್ರ ಕಡ್ಡಾಯ ಎನ್ನುವುದನ್ನು ನೆನೆಪಿನಲ್ಲಿಡುವುದು.
- ಧರ್ಮಕ್ಷೇತ್ರಮಟ್ಟದಲ್ಲಿ ಕಾರ್ಯಕ್ರಮಗಳನ್ನು ರೂಪಿಸುವಾಗ ಅವು **DEXCO** ನಲ್ಲಿ ಸಮಾಲೋಚನೆಗೊಳಪಡುತ್ತವೆ, ಆದುದರಿಂದ ಧರ್ಮಕೇಂದ್ರಮಟ್ಟದಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ ಅವುಗಳಿಗೆ ಧರ್ಮಕ್ಷೇತ್ರಮಟ್ಟದ (**DEXCO)** ಹೆಸರಿನಲ್ಲಿ ಪ್ರಚಾರ ಮಾಡುವುದು ತಪ್ಪಾಗುತ್ತದೆ ಮಾತ್ರವಲ್ಲ ವ್ಯವಸ್ಥೆಯ ಅದಲು-ಬದಲಾದಾಗ ಕೆಲಸ ಮಾಡಲು ಕಷ್ಟವಾಗುತ್ತದೆ ಎಂಬುದನ್ನು ಮನಗಂಡು ಸಹಕರಿಸಲು ವಿನಂತಿಸುತ್ತೇವೆ.
- ನಮ್ಮ ಧರ್ಮಕ್ಷೇತ್ರದ ಯುವಜನತೆಯ ಉತ್ಸಾಹ ಹಾಗೂ ಧರ್ಮಸಭೆಯ ಮೇಲಿನ ಅವರ ಪ್ರೀತಿ ನಿಜವಾಗಿಯು ಮೆಚ್ಚುವಂತಹದ್ದು ಈ ದಿಶೆಯಲ್ಲಿ ಅವರಿಗೆ ಸೂಕ್ತ ಮಾರ್ಗದರ್ಶನ ಹಾಗೂ ಪ್ರೋತ್ಸಾಹ ಅಗತ್ಯ ಏನ್ನುವುದನ್ನು ಮನಗಂಡು ಜೊತೆಯಾಗಿ ಕೆಲಸ ಮಾಡಲು ನಿಮ್ಮ ನೆರವು ಹಾಗೂ ಸಹಾಕಾರವನ್ನು ಕೋರುತ್ತೇನೆ.

## V ಯುವಜನರಿಂದ ಶಿಲುಬೆ ಆರಾಧನೆ, ತೈಝೆ ಪ್ರಾರ್ಥನೆ ಮತ್ತು ಅಹೋ ರಾತ್ರಿ ಪ್ರಾರ್ಥನೆ.

"ಪವಿತ್ರಾತ್ಮರಿಂದ ಪ್ರೇರಿತರಾಗಿ ಎಲ್ಲಾ ಸಮಯಗಳಲ್ಲೂ ಪ್ರಾರ್ಥಿಸಿರಿ. ನಿಮ್ಮ ಕೋರಿಕೆ, ಭೇಡಿಕೆಗಳನ್ನು ದೇವರಿಗೆ ಅರ್ಪಿಸಿರಿ" (ಎಫೇಸ 6:18)

ವಿಶ್ವಾಸದ ವರುಷದಲ್ಲಿ ಜ್ಯುಬಿಲಿ ವರ್ಷದ ಹೊಸ್ತಿಲಲ್ಲಿರುವ ನಮ್ಮ ಧರ್ಮಕ್ಷೇತ್ರದಲ್ಲಿ ಎಲ್ಲಾ ಧರ್ಮಕೇಂದ್ರಗಳಲ್ಲಿ ಶಿಲುಬೆ ಸಂಚರಿಸುತ್ತಿದೆ. ಧರ್ಮಕ್ಷೇತ್ರದ ಎಲ್ಲಾ ಯುವಸಂಘಟನೆಗಳು (ಐ.ಸಿ.ವೈ.ಎಮ್,

ವೈಸಿಎಸ್/ವೈಎಸ್ಎಮ್) ತಮ್ಮ ಧರ್ಮಕೇಂದ್ರಕ್ಕೆ ಶಿಲುಬೆ ಆಗಮಿಸುವಾಗ ಶಿಲುಬೆ ಆರಾಧನೆ, ತೈಝೆ ಪ್ರಾರ್ಥನೆ ಮತ್ತು "ಅಹೋ ರಾತ್ರಿ ಪ್ರಾರ್ಥನೆ" ಗಳನ್ನು ಆಯೋಜಿಸಲು ಕರೆಕೊಡುತ್ತೇನೆ.

- ಧರ್ಮಕ್ಷೇತ್ರಮಟ್ಟದಲ್ಲಿ 22-23, ನವೆಂಬರ್ 2013 ರಂದು "ಒಂದು ರಾತ್ರಿ ಯೇಸುವಿನೊಡನೆ" ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಯನ್ನು ಮುಂದೆ ತಿಳಿಸಲಾಗುವುದು.

## VI ಮಾಹಿತಿಗಳು:

- **WYD (World Youth Day)**

  16-28 ಜುಲೈ, 2013 ರಲ್ಲಿ ಬ್ರೆಜಿಲ್ ದೇಶದ ರೀಯೋ ದೆ ಜೆನೆರೊ ನಲ್ಲಿ ಜರಗುವುದು. ಆಸಕ್ತರು ಯುವಜನಸೇವೆಯ ರಾಷ್ಟ್ರೀಯ ಕಛೇರಿಯನ್ನು ಸಂಪರ್ಕಿಸುವುದು.

  ದೂರವಾಣಿ ಸಂಖ್ಯೆ: 001-23340773, +91-9013905078, +91-9990007185

  ಇ–ಮೆಲ್:

  Website: www.icym.net, www.youthactive8.org

- **Taize Experience (ಫ್ರಾನ್ಸ್‌ನಲ್ಲಿ ತೈಝೆ ಅನುಭವ)**

  ಫ್ರಾನ್ಸಿನಲ್ಲಿ 3 ತಿಂಗಳ **ತೈಝೆ** ಅನುಭವ ಪಡೆಯಲಿಚ್ಛಿಸುವವರು ನಿಮ್ಮ ಪಾಸ್ ಪೋರ್ಟ್, ಗುರುಗಳು ಮತ್ತು ಪೋಷಕರ ಅನುಮತಿ ಪತ್ರದೊಂದಿಗೆ ಯುವಮಿತ್ರ ಕಛೇರಿಯನ್ನು ಸಂಪರ್ಕಿಸಿ.

- NYC (National Youth Convention)

  5-12 Oct, 2013 ರಲ್ಲಿ ಪಂಜಾಬಿನ ಜಲಂದರ್‌ನಲ್ಲಿ ಜರಗುವುದು. ಹೆಚ್ಚಿನ ಮಾಹಿತಿಯನ್ನು ಮುಂದಿನ ಸುತ್ತೋಲೆಯಲ್ಲಿ ನಿರೀಕ್ಷಿಸಿ.

ನಿಮ್ಮ ಪ್ರೋತ್ಸಾಹ, ಪ್ರಾರ್ಥನೆ ಸದಾ ಆಶಿಸುವ,

ಯುವ ಜನತೆಯಲ್ಲಿ ನಿಮ್ಮವ,

ಫಾ. ರೊನಾಲ್ಡ್ ವೇಗಸ್
(ಯುವ ನಿರ್ದೇಶಕರು)

ಸಿ. ನಿಂಪಾ ಡಿ'ಸೋಜ ಎ.ಸಿ
(ಯುವ ಸಚೇತಕಿ)